Journals
Association of India

ISSN-[illegible]678X

S.T.C. Arts and Commerce College
BANHATTI

# SANSHODHANA MARGA

# ಸಂಶೋಧನಾ ಮಾರ್ಗ

*Peer Reviewed Journal of Social Science, Humanities and Languages*

ಸಂಪುಟ-5, ಸಂಚಿಕೆ -7 ಆಗಸ್ಟ್ 15 2020 ರಿಂದ ಸೆಪ್ಟೆಂಬರ್ 28 2020, ಪುಟಗಳು III+150 ರೂ. 150/-

**Volume-5. Issues-7, August 15, 2020 to Sep. 28, 2020 Pages III+150 Rs. 150/-**

Chief Editor
**Dr. Madhu,** *Ph.D.*

Published by
**Institute of Praja Vikasa**
Mysuru

Journals
Association of India

S.T.C. Arts and Commerce College BANHATTI 587 311

# ಸಂಪಾದಕ ಮಂಡಳಿ

**ಪ್ರಧಾನ ಸಂಪಾದಕರು**
ಡಾ. ಮಧುಗುಂಡ್ಲುಪೇಟೆ

**ಹಿರಿಯ ಸಂಪಾದಕರು**
ಪ್ರೊ. ಮಹೇಶ್‌ಚಂದ್ರಗುರು

**ಸಂಪಾದಕ ಮಂಡಳಿ ಸದಸ್ಯರು**
ಪ್ರೊ.ಡಿ.ಆನಂದ್, (ಮೈಸೂರು)
ಪ್ರೊ.ಎಂ.ಆರ್.ಗಂಗಾಧರ್, (ಮೈಸೂರು)
ಪ್ರೊ.ನಂಜಯ್ಯ ಹೊಂಗನೂರು, (ಮೈಸೂರು)
ಡಾ.ಗುರುಸಿದ್ದಯ್ಯ, ಸಿ, (ಮೈಸೂರು)
ಡಾ. ಎಂ. ಎನ್. ಬೆನ್ನೂರ
ಪ್ರೊ.ಜೆ.ಸೋಮಶೇಖರ್, (ಮೈಸೂರು)
ಪ್ರೊ.ಬಿ.ನಾಗರಾಜು, (ಮೈಸೂರು)
ಪ್ರೊ.ಸಿ.ಕೆ.ಪುಟ್ಟಸ್ವಾಮಿ, (ಮೈಸೂರು)
ರಮೇಶ್ ಜಯರಾಮಯ್ಯ, (ಮೈಸೂರು)

**ಸಾಂಖ್ಯಿಕ ಸಂಪಾದಕರು**
ಪ್ರೊ.ಅನ್ನಪೂರ್ಣ ಎಂ (ಮೈಸೂರು)
ಡಾ.ಎಸ್.ವೆಂಕಟೇಶ್, (ಮೈಸೂರು)
ಪ್ರೊ.ಗುರುಲಿಂಗಯ್ಯ (ಶಿವಮೊಗ್ಗ)
ಡಾ.ಮಾರುತಿ (ಬೆಂಗಳೂರು)
ಡಾ.ಎಲ್.ಶ್ರೀನಿವಾಸ್ (ಹಂಪಿ)
ಕಿರಣ್‌ಕಮಲ್ ಪ್ರಸಾದ್ (ಬೆಂಗಳೂರು)
ಸಿ. ಹರಕುಮಾರ್ (ಮೈಸೂರು)
ಡಾ.ರಾಮಚಂದ್ರ (ಮೈಸೂರು)
ಪ್ರೊ.ಮನೋಹರ್‌ಯಾದವ್ (ಬೆಂಗಳೂರು)
ಪ್ರೊ.ವಿಶ್ವನಾಥ್ (ಮಂಗಳೂರು)
ಪ್ರೊ.ಟಿ.ಎಚ್.ಮೂರ್ತಿ (ಬೆಂಗಳೂರು)
ಡಾ. ಯಶೋಧ (ಮೈಸೂರು)
ಡಾ.ಮಂಗಳಮೂರ್ತಿ (ಮೈಸೂರು)
ಡಾ. ಆಂಜನೇಯ (ಮೈಸೂರು)

**ತಾಂತ್ರಿಕ ಸಹಾಯಕರು**
ಅಂತೋಣಿ ಪ್ರಜ್ವಲ್

**ಸಂಚಾಲಕರು**
ಶ್ರೀಮತಿ ಜಿ.ಪಿ.ಮೋಕ್ಷರಾಣಿ
ಮೇರಿ ಸ್ಟೆಲ್ಲಾ ಎಂ.
ವಿನುತ ಎಂ.ಆರ್

**ಕಾನೂನು ಸಲಹೆಗಾರರು**
ಎನ್.ಡಿ. ಮಹೇಶ್, ವಕೀಲರು, ಮೈಸೂರು

₹ 150

ಹಕ್ಕುಗಳು ಪ್ರಕಾಶಕರದು

Owned, Edited & Published by: Dr.Madhu, #LIG 689, 1st Stage, Hudeo House, Hebbal, Mysore District, Karnataka.
Printed by RAMANATHA GUPTA M.S, # 1130/8-6-7, F-37, 38, S.J.H.Road, Vidyaranyapura, Mysor-08.
Printed at GUPTA OFFSET PRINERS, # 1130/8-6-7, F-37, 38, S.J.H.Road, Vidyaranyapura, Mysor-08.





## ಪರಿವಿಡಿ


| | | ಪು.ಸಂಖ್ಯೆ |
|---|---|---|
| 1. | ಚಾಮರಾಜನಗರ ಜಿಲ್ಲೆ ಅಭಿವೃದ್ಧಿ ಆಡಳಿತದಲ್ಲಿ ಜಿಲ್ಲಾಧಿಕಾರಿಗಳ ಪಾತ್ರ: ಒಂದು ವಿಶ್ಲೇಷಣೆ *ಅರ್ಜುನ್ ಮತ್ತು **ಪ್ರೊ.ದಯಾನಂದ ಮಾನೆ | 1–10 |
| 2. | ಕೊಪ್ಪಳ ಜಿಲ್ಲೆಯ ಪ್ರಾಗಿತಿಹಾಸ ಕಾಲದ ನೆಲೆಗಳು *ಡಾ. ಪದ್ಮ ಬಿ.ಎಸ್. **ಡಾ. ನಾಗರಾಜ ವಿ. | 11–17 |
| 3. | ಕ್ರೋಮೈಟ್ ಗಣಿಗಾರರ ಆರೋಗ್ಯ ಸಮಸ್ಯೆಗಳ ವಿಶ್ಲೇಷಣೆ *ಅರುಣ್‌ಕುಮಾರ ಜೆ. ಮತ್ತು **ಡಾ. ಅಂಜನಪ್ಪ ಬಿ.ಹೆಚ್. | 18–37 |
| 4. | ಅಂಬಳಿಕೆ ಹಿರಿಯಣ್ಣ ಅವರ ಬದುಕು–ಬರಹ * ಕೋಮಲ.ಜಿ.ಎನ್ | 38–45 |
| 5. | ಲಂಬಾಣಿ ಭಾಷಾ ಸಂಸ್ಕೃತಿ ಮತ್ತು ಸಮಾಜ *ಸಂತೋಷ್ ಎಲ್ **ಡಾ.ಜಿ.ವಿಜಯಸಾರಥಿ | 46–61 |
| 6. | ಕರ್ನಾಟಕದಲ್ಲಿ ಸ್ವತಂತ್ರ ಪೂರ್ವ ಮತ್ತು ನಂತರದ ಗ್ರಾಮೀಣಾಭಿವೃದ್ಧಿ ಪ್ರಯೋಗಗಳು – ಒಂದು ಅಧ್ಯಯನ *ಸತೀಶ ವಿ., | 62–76 |
| 7. | ಪರಂಪರೆಯ ಸತ್ವದಲ್ಲಿಯೇ ಆಧುನಿಕತೆಯ ಬೇರುಗಳನ್ನು ಹುಡುಕುತ್ತಿರುವ ರಾಘವೇಂದ್ರ ಪಾಟೀಲರ ತೇರು *ಭಾರ್ಗವಿ ಜಿ.ಎಸ್. | 77–86 |
| 8. | ಬಿ.ಟಿ. ಲಲಿತಾನಾಯಕರ ಸ್ತ್ರೀವಾದಿ ಕಥೆಗಳ ಒಂದು ವಿಮರ್ಶಾತ್ಮಕ ಅಧ್ಯಯನ ಕೆ. ಪೂರ್ಣಿಮ | 87–100 |
| 9. | ಪ್ರಾಚೀನ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಆಸ್ತಿ ಮತ್ತು ಅಧಿಕಾರ ಪರಿಕಲ್ಪನೆ *ಉಮೇಶ ತಿಮ್ಮಾಪೂರ | 101–112 |
| 10. | ಪರಿಶಿಷ್ಟ ಜಾತಿ ಸಬಲೀಕರಣದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಪಾತ್ರ: ಹಾಸನ ಜಿಲ್ಲೆಗೆ ಸಂಬಂಧಿಸಿದ ಒಂದು ವಿಶ್ಲೇಷಣಾತ್ಮಕ ಅಧ್ಯಯನ * ಪ್ರಭು.ಎಸ್.ಬಿ. | 113–123 |
| 11. | ದಲಿತರು ಮತ್ತು ಜನಿವಾರ ಸಂಸ್ಕೃತಿ *ಮಂಜುಳ ಸಿ.ಕೆ | 124–131 |
| 12. | ದೇವರ ನಿಂಬರಗಿ: ಒಂದು ಅಧ್ಯಯನ *ಪ್ರೊ. ಎಂ.ಎಸ್. ಬೆನ್ನೂರ | 132–149 |

ISSN-2454-678X

12

# ದೇವರ ನಿಂಬರಗಿ: ಒಂದು ಅಧ್ಯಯನ

*ಪ್ರೊ. ಎಂ.ಎನ್. ಬೆನ್ನೂರ

**ಪ್ರಸ್ತಾವಣೆ:**

ಬಿಜಾಪೂರ ಜಿಲ್ಲೆಯ ಇಂಡಿ ತಾಲೂಕಿನಿಂದ 35 ಮೈಲು ದೂರದ ದೇವರ ನಿಂಬರಗಿ ಬಲಭೀಮದೇವರ ಜಾಗೃತ ಸ್ಥಳವೆಂದೇ ಪ್ರಖ್ಯಾತಿ ಪಡೆದಿದೆ. ಕರ್ನಾಟಕ ಹಾಗೂ ಮಹಾರಾಷ್ಟ್ರದ ಸಾಂಸ್ಕೃತಿಕ ನೆಲೆಯಾದ ಈ ಸ್ಥಳ ಕರ್ನಾಟಕದ ಅನೇಕ ರಾಜಮನೆತನಗಳ ಆಳ್ವಿಕೆಗೆ ಒಳಪಟ್ಟಂತಹ ಸ್ಥಳವಾಗಿದೆ. ಧಾರ್ಮಿಕ, ಸಾಹಿತ್ಯಿಕ, ಕಲೆ ಮತ್ತು ವಾಸ್ತುಶಿಲ್ಪ ಹಾಗೂ ಗುರುಲಿಂಗಜಂಗಮ ಮಹಾರಾಜರ ಆಧ್ಯಾತ್ಮಿಕ ಮುಂತಾದ ಚರಿತ್ರೆಯನ್ನು ಒಳಗೊಂಡ ಸ್ಥಳ ಇದಾಗಿದೆ. ದೇವರ ನಿಂಬರಗಿ : ಒಂದು ಅಧ್ಯಯನ ವಿಷಯ ಕುರಿತು ಹೊಸ ವಿಚಾರಗಳನ್ನು ಬೆಳಕಿಗೆ ತರಲು ಪ್ರಯತ್ನಿಸಿದ್ದೇನೆ.ದಿವ್ಯ ನಿರ್ಲಕ್ಷಕ್ಕೆ ಒಳಗಾದ ಈ ಪ್ರದೇಶದಲ್ಲಿನ ಶಿಲ್ಪಮೂರ್ತಿಗಳು, ದೇವಾಲಯಗಳು ವೀರಗಲ್ಲುಗಳು ಹಾಗೂ ಮಹಾಸತಿಕಲ್ಲುಗಳು ದೇವರ ನಿಂಬರಗಿಯ ಪ್ರಾಚೀನತೆಯನ್ನು ಸಮಾಜದ ಬೆಳಕಿಗೆ ತರಲು ಸಹಾಯಕವಾಗಿ ನಿಂತಿವೆ. ಇಲ್ಲಿ ಲಭ್ಯವಾದ ಆಧಾರಗಳಿಂದ ದೇವರ ನಿಂಬರಗಿ ತರ್ದವಾಡಿ ನಾಡಿನಲ್ಲಿ ಬರುವ ಗ್ರಾಮವಾಗಿತ್ತು. ಕಲ್ಯಾಣಿಯ ಚಾಲುಕ್ಯರ ಆಳ್ವಿಕೆಗೆ ಒಳಪಟ್ಟಂತಹ ಅನೇಕ ತೃಟಿತ ಆಧಾರಗಳು ಲಭ್ಯವಾಗಿವೆ. 14 ನೇ ಶತಮಾನದಲ್ಲಿ ಬಹಮನಿ ರಾಜ್ಯಕ್ಕೆ ಒಳಪಟ್ಟಂತಹ ಈ ಪ್ರದೇಶ ಗುಲ್ಬರ್ಗಾದ ಒಂದು ಪ್ರಾಂತವಾಗಿ, ಮುಂದೆ ಮಹಮ್ಮದ

*ಸಹಪ್ರಾಧ್ಯಾಪಕರು, ಮುಖ್ಯಸ್ಥರು, ಇತಿಹಾಸ ವಿಭಾಗ, ಎಸ್.ಟಿ.ಸಿ. ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಬನಹಟ್ಟಿ – 587311.





ISSN-2454-678X

S.T.C. Arts and Commerce College BANHATTI 587 311

ಗವಾನನ ಮರಣದ ತರುವಾಯ ಈ ಸ್ಥಳ ಬಿಜಾಪೂರದ ಯೂಸೂಫ್ ಆದಿಲ್‌ಶಾಹಿ ಆಳ್ವಿಕೆಗೆ ಒಳಪಟ್ಟಿತು. ಇಲ್ಲಿ ಲಭ್ಯವಾದ ದಂಡಿನ್ ಫಿರಾ ದರ್ಗಾ ಉತ್ತಮ ನಿದರ್ಶನವಾಗಿದೆ.

1723 ರಿಂದ 1760 ರ ವರೆಗೆ ಹೈದ್ರಾಬಾದ್ ನಿಜಾಮ್‌ನ ಆಳ್ವಿಕೆಗೆ ಹಾಗೂ 1760 ರ ನಂತರ ಪೇಶ್ವೆಯಾದ ಬಾಳಾಜಿ ಬಾಜಿರಾಯನ ಆಡಳಿತಕ್ಕೆ ಈ ಸ್ಥಳ ಒಳಪಟ್ಟಿತು. ಬಿಜಾಪೂರ 1818 ರಲ್ಲಿ ಬ್ರಿಟಿಷರ ಕೈವಶವಾಗಿ ಸಾತಾರ ರಾಜನ ವಶಕ್ಕೆ ಬಂದಿತು. ಆದರೆ ಇಂಡಿ ಹಾಗೂ ಮುದ್ದೇಬಿಹಾಳದ ತಾಲೂಕುಗಳ 345 ಗ್ರಾಮಗಳು ಬಾಗಲಕೋಟೆಯ ಸಬ್‌ಕಲೆಕ್ಟರನ ಅಧೀನಕ್ಕೆ ಬಂದವು. 1838 ರ ನಂತರ ಮೇಲಿನ ಎರಡು ತಾಲೂಕಿನ ಗ್ರಾಮಗಳನ್ನು ಸೊಲ್ಲಾಪುರ ಜಿಲ್ಲೆಗೆ ಒಳಪಡಿಸಿದ್ದರಿಂದ ದೇವರ ನಿಂಬರಗಿ ಅದರ ಒಂದು ಭಾಗವಾಗಿ ಮಾರ್ಪಟ್ಟಿತು. 1857 ರ ನಂತರ ಕೃಷ್ಣಾನದಿಯ ಉತ್ತರ ದಿಕ್ಕಿನಲ್ಲಿರುವ ಇಂಡಿ, ಮುದ್ದೇಬಿಹಾಳ, ಮನಗೂಳಿ, ಹಿಪ್ಪರಗಿ ತಾಲ್ಲೂಕುಗಳನ್ನು ಕಲಾದಗಿ ಜಿಲ್ಲೆಗೆ ಸೇರಿಸಲಾಯಿತು. ಹೀಗೆ ದೇವರ ನಿಂಬರಗಿ ವಿವಿಧ ರಾಜಮನೆತನಗಳ ಆಳ್ವಿಕೆಗೆ ಒಳಪಟ್ಟಿದ್ದರಿಂದ ಕನ್ನಡ, ಉರ್ದು ಮರಾಠಿ ಹಾಗೂ ಪರ್ಶಿಯನ್ ಭಾಷೆ ಇಲ್ಲಿ ನೆಲೆವೂರಿತು. ಮುಂದೆ ಸದ್ಗುರು ಗುರುಲಿಂಗಜಂಗಮ ಮಹಾರಾಜರು 19 ನೇ ಶತಮಾನದಲ್ಲಿ ಭಕ್ತಿಯ ಮೂಲಕ ಅಜ್ಞಾನದಲ್ಲಿದ್ದ ಅಂಧಕಾರದ ಜನರನ್ನು ಜ್ಞಾನದ ಬೆಳಕಿನ ಕಡೆಗೆ ಕೊಂಡೊಯ್ಯಲು ಮರಾಠಿ ಮತ್ತು ಕನ್ನಡ ಭಾಷೆಯಲ್ಲಿ ಅನೇಕ ಪದ್ಯಗಳನ್ನು ರಚಿಸಿದರು.

**ದೇವರ ನಿಂಬರಗಿಯ ಸ್ಥಳನಾಮ :**

ಜಿ.ಎನ್.ಉಪಾಧ್ಯೆಯರ ಮಹಾರಾಷ್ಟ್ರ ಕರ್ನಾಟಕ ಸಾಂಸ್ಕೃತಿಕ ಸಂಬಂಧ ಎಂಬ ಗ್ರಂಥದಲ್ಲಿ ಡೊಂಬರು, ಹಿಪ್ಪರರು ಹಾಗೂ ನಿಂಬರರು ಎಂಬ ಜನಾಂಗದ ಊರುಗಳಿಗೆ ಈ ಹೆಸರು ಬಂದಿದೆ ಎಂದು ಹೇಳಲಾಗಿದೆ. ನಿಂಬರು ಮುಖ್ಯಸ್ಥರಾಗಿ

BANHATTI 587 311 S.T.C. College



ಇದ್ದ ಊರುಗಳಿಗೆ ನಿಂಬರಗಿ ಎಂದು ಕರೆಯಲಾಗಿದೆ. ಕೆಲವು ಐತಿಹ್ಯ ಪ್ರಕಾರ ಕೊಲ್ಲಾಪೂರದ ನಿಂಬಣ್ಣ ಎಂಬ ಸಾಮಂತನಿಂದ ನಿಂಬರಗಿ ಎಂಬ ಸ್ಥಳನಾಮ ಬಂದಿದೆ ಎಂದು ಹೇಳಲಾಗಿದೆ. ಸ್ಥಳೀಕರ ಪ್ರಕಾರ ನಿಂಬ ಎಂಬುದು ಬೇವಿನ ಮರಕ್ಕೆ ಇರುವ ಸಂಸ್ಕೃತದ ಹೆಸರಾಗಿದೆ. ಈ ಗಿಡವನ್ನು ಲಕ್ಷ್ಮೀ ದೇವತೆ ಎಂದು ಪೂಜಿಸುವ ಪರಿಪಾಠ ಎಲ್ಲಾ ಕಡೆ ಇದೆ. ಆದರೆ ಇಂಡಿ ತಾಲ್ಲೂಕಿನ ಅನೇಕ ಹಳ್ಳಿಗಳಿಗೆ ನಿಂಬರಗಿ, ನಿಂಬಗಾಂವ, ನಿಂಬಾಳ, ನಿಂಬಪುರ ಎಂದು ಕರೆಯುವರು. ಆದರೆ ದೇವರ ನಿಂಬರಗಿ ಎಂದರೆ ಗ್ರಾಮದಲ್ಲಿ ಎಲ್ಲಿ ನೋಡಿದರೂ ಅಲ್ಲಿ ದೇವಾಲಯಗಳು ಹಾಗೂ ಬೇವಿನ ಮರಗಳು ಇರುವುದರಿಂದ ಈ ಗ್ರಾಮಕ್ಕೆ ಈ ಹೆಸರು ಬಂದಿರಬಹುದು ಎಂದು ಊಹಿಸಲಾಗಿದೆ. ಈ ಸ್ಥಳನಾಮದ ಬಗ್ಗೆ ಯಾವುದೇ ಶಾಸನ, ಲೇಖನಗಳು ಲಭ್ಯವಾಗದೇ ಇರುವುದರಿಂದ ಸ್ಥಳೀಕರ ಅನಿಸಿಕೆ ಹಾಗೂ ಗ್ರಂಥಗಳ ಋಣದಿಂದ ಈ ಅಭಿಪ್ರಾಯಕ್ಕೆ ಬರಲಾಗಿದೆ.

**ದೇವರ ನಿಂಬರಗಿಯ ಪ್ರಮುಖ ದೇವಾಲಯಗಳು :**

ದೇವರ ನಿಂಬರಗಿಯಲ್ಲಿ ಕ್ಷೇತ್ರ ಕಾರ್ಯ ಕೈಗೊಂಡಾಗ ಸುಮಾರು 34 ದೇವಾಲಯಗಳು ಕಂಡು ಬಂದಿದ್ದು ವಿಶೇಷವಾಗಿತ್ತು. ಈ ಊರಿನ ಪ್ರಾಣದೇವರಾದ ಬಲಭೀಮ ದೇವಸ್ಥಾನ ಊರಿನ ಜಾಗೃತ ದೇವಾಲಯ ಹಾಗೂ ಉದ್ಭವ ಮೂರ್ತಿಯಾಗಿದೆ ಎಂದು ಸ್ಥಳೀಕರ ಅಭಿಪ್ರಾಯವಾಗಿದೆ.

**ಬಲಭೀಮ ದೇವಾಲಯ ಹಾಗೂ ವಾಸ್ತುಶಿಲ್ಪ :**

ಬಲಭೀಮವೆಂದರೆ ಹನುಮಂತನ ಇನ್ನೊಂದು ರೂಪಕವಾಗಿದೆ. ಈ ದೇವಾಲಯದ ಗರ್ಭಗುಡಿಯನ್ನು ಕ್ರಿ.ಶ. 1480 ರಲ್ಲಿ ಧನಾಯಿ ಹಾಗೂ ಮಾಳಾಯಿ ಎಂಬ ಸುಪನಾಳ ಗ್ರಾಮದ ಗೌಡತಿಯರು ಇದನ್ನು ನಿರ್ಮಿಸಿದ್ದಾರೆ ಎಂದು ತಾಮ್ರಪಟ ಲೇಖನ ತಿಳಿಸುತ್ತದೆ. ಈ ದೇವಾಲಯದ ಸುತ್ತಲಿನ ಆವರಣವನ್ನು





ತಾಸಗಾಂವದ ಜಹಗೀರದಾರ ಪರಶುರಾಮ ಪಟವರ್ಧನ ಬಾಹು ಹಾಗೂ ಅಕ್ಕಲಕೋಟೆಯ ರಾಜ ಭೋಸಲೆ ಕ್ರಿ.ಶ 1730 ರಲ್ಲಿ ಕಟ್ಟಿಸಿದ್ದಾರೆ. ಹೈದ್ರಾಬಾದ್‌ದ ನಿಜಾಮನು ಈ ದೇವಾಲಯದ ಜಾತ್ರೆಗೆ ಪ್ರತಿವರ್ಷ 640 ರೂ. ಕೊಡುತ್ತಿರುವ ವಿಚಾರ ಗೆಜೆಟ್‌ನಿಂದ ತಿಳಿಯುತ್ತದೆ. (ಶ್ರೀ ಗುರುಲೀಲಾಮೃತ ಪು.ಸಂ – 58 – 59) ಸ್ವಾಮಿ ಸಮರ್ಥರ ಚರಿತ್ರೆಯಿಂದ ಈ ದೇವಾಲಯದ ದಕ್ಷಿಣದ ದ್ವಾರಬಾಗಿಲು ಹಾಗೂ ಚಂದ್ರಶಾಲೆಯನ್ನು ಅಕ್ಕಲಕೋಟದ ಖೈರಾಟ ಗ್ರಾಮದ ದೇಶಮುಖ ಕಟ್ಟಿಸಿದನು ಎಂದು ತಿಳಿಯಲಾಗಿದೆ. ಆದರೆ ಆ ವ್ಯಕ್ತಿಯ ಹೆಸರನ್ನು ಬರೆದಿಲ್ಲದಿದ್ದರೂ, ಆ ದೇಶಮುಖ ವಾರ್ಷಿಕವಾಗಿ ಆ ದೇವರ ನಂದಾದೀವಿಗೆ ನೀಡುತ್ತಿರುವ ವಿಚಾರ ಲೇಖನದಿಂದ ತಿಳಿಯಲಾಗಿದೆ. ಬಲಭೀಮ ದೇವಾಲಯ, ದೇವರ ನಿಂಬರಗಿಯ ವಾಯುವ್ಯ ದಿಕ್ಕಿನ ಹಳ್ಳದ ದಡದಲ್ಲಿ ಕಟ್ಟಲ್ಪಟ್ಟಿದೆ. ಈ ದೇವಾಲಯಕ್ಕೆ 3 ಪ್ರವೇಶದ್ವಾರಗಳಿವೆ. ಮುಖ್ಯ ಪ್ರವೇಶದ್ವಾರ ಪೂರ್ವಾಭಿಮುಖವಾಗಿದೆ. ಇನ್ನೊಂದು ಪಶ್ಚಿಮಾಭಿಮುಖವಾಗಿದೆ. ದಕ್ಷಿಣದಲ್ಲಿ ಚಿಕ್ಕ ಪ್ರವೇಶ ದ್ವಾರವಿದೆ. ಈ ದೇವಾಲಯ ಬೃಹತ್ ಪ್ರಮಾಣದ ಆವರಣವನ್ನು ಒಳಗೊಂಡಿದೆ. ಇಂಡೋ ಇಸ್ಲಾಮಿಕ್ ಶೈಲಿಯಿಂದ ಈ ದೇವಾಲಯವನ್ನು ನಿರ್ಮಿಸಿದ್ದಾರೆ. ದೇವಾಲಯ ಪೂರ್ವ – ಪಶ್ಚಿಮವಾಗಿ 141 ಅಡಿ ಅಗಲ ದಕ್ಷಿಣೋತ್ತರವಾಗಿ 172 ಅಡಿ ಉದ್ದವಿದೆ. ಪೂರ್ವದ ಮಹಾದ್ವಾರ 9 ಅಡಿ ಎತ್ತರ 4' 8' ಅಡಿ ಅಗಲವಿದೆ. ದ್ವಾರದ ಲಲಾಟದಲ್ಲಿ ಕಮಲಾಕೃತಿಯಲ್ಲಿನ ದ್ವಾರದ ಎರಡು ಬದಿಯಲ್ಲಿ ದ್ವಾರಪಾಲಕರನ್ನು ಕೆತ್ತಲಾಗಿದೆ. ಇವು 2 ಅಡಿ 5 ಇಂಚು ಎತ್ತರ ಇವೆ. ಒಬ್ಬ ದ್ವಾರಪಾಲಕ ಕೈಯಲ್ಲಿ ಬೆತ್ತ ಹಿಡಿದಂತೆ ಹಾಗೂ ಕೊಳಲನ್ನು ಊದುವ ಕೃಷ್ಣನ ಭಂಗಿ ಇದೆ. ಕೊರಳಲ್ಲಿ ಹೂಮಾಲೆ, ಕಿರೀಟ, ತೋಳಲ್ಲಿ ರುದ್ರಾಕ್ಷಿ, ಕಾಲುಗಳಲ್ಲಿ ಕಡಗ ಕಂಡುಬಂದಿವೆ. ದ್ವಾರದ ಎರಡು ಬದಿಯ ಮೇಲ್ಭಾಗದಲ್ಲಿ ನವಿಲುಗಳು ಮುತ್ತಿನ

ಹಾರವನ್ನು ಕಚ್ಚಿಕೊಂಡಿವೆ. ದಕ್ಷಿಣ ದಿಕ್ಕಿನಲ್ಲಿ ಚಿಕ್ಕದಾದ ದ್ವಾರ ಬಾಗಿಲು ಇದ್ದು, ಇದರ ಮೇಲ್ಭಾಗದಲ್ಲಿ ಎತ್ತರ ಭಂಗಿಯಲ್ಲಿ ನಿಂತಿರುವ ಹನುಮನ ವಿಗ್ರಹವಿದೆ. ದಕ್ಷಿಣದ ದ್ವಾರಮಂದಿರ ದಾಟಿದ ಬಳಿಕ ಬಲಭಾಗದಲ್ಲಿ ದೀಪಸ್ತಂಭವಿದೆ ಇದು 15 ಅಡಿ ಎತ್ತರವಿದೆ. ಇದರ ಗರ್ಭಗೃಹ ದಕ್ಷಿಣಾಭಿಮುಖವಾಗಿದೆ. ಇದರ ಸುತ್ತಲೂ ವಿಶಾಲವಾದ ಪ್ರಾಕಾರವಿದೆ. ಇದಕ್ಕೆ ಹೊಂದಿಕೊಂಡಂತೆ ಕಮಾನಿನ ಆಕೃತಿಯಲ್ಲಿ ಇಂಡೋ – ಇಸ್ಲಾಮಿಕ್ ಶೈಲಿಯ ಮಂಟಪಗಳಿವೆ. ಅಂದು ಇಲ್ಲಿ ಪಾಠ – ಪ್ರವಚನಗಳನ್ನು ಭೋದಿಸಲಾಗುತ್ತಿತ್ತು. ಪ್ರಾಕಾರದ ಪಶ್ಚಿಮಕ್ಕೆ ಮತ್ತು ಈಶಾನ್ಯಕ್ಕೆ ಎರಡು ಬಾವಿಗಳಿವೆ. ಈ ಬಾವಿಯ ನೀರನ್ನು ದೇವಾಲಯದ ಮೂರ್ತಿಯ ಅಭಿಷೇಕಕ್ಕೆ ಬಳಸಲಾಗುತ್ತಿತ್ತು. ದೇವಾಲಯದ ಆವರಣದ ಆಚೆ 3 ಬಾವಿಗಳಿವೆ ಒಟ್ಟಿಗೆ 5 ಬಾವಿಗಳು ಇಲ್ಲಿದ್ದರಿಂದ ಇವುಗಳಿಗೆ ಪಂಚಕಲ್ಯಾಣ ಬಾವಿಗಳೆಂದು ಕರೆಯುವುದು ವಾಡಿಕೆಯಾಗಿದೆ. ದೇವಾಲಯದ ಪಶ್ಚಿಮ ಭಾಗದ ಪ್ರಾಕಾರದಲ್ಲಿ ಬಿಳ್ಳಯ್ಯನ ಸಿದ್ಧ ದೇವಾಲಯವಿದೆ. ಇದಕ್ಕೆ ಕೇವಲ ಗರ್ಭಗೃಹ ಮಾತ್ರ ಇದೆ. ಇದು ಸದ್ಗುರು ಗುರುಲಿಂಗಜಂಗಮ ಮಹಾರಾಜರು ಧ್ಯಾನ ಮತ್ತು ಪ್ರವಚನ ಮಾಡುವ ಸ್ಥಳವಾಗಿತ್ತು ಎಂದು ಸ್ಥಳೀಕರ ಅಭಿಪ್ರಾಯವಾಗಿದೆ. ಇದರ ಪಕ್ಕದ ಚಿಕ್ಕ ಕೋಣೆಯಲ್ಲಿ ಪಲ್ಲಕ್ಕಿ ಮತ್ತು ದೇವರ ಅಲಂಕಾರದ ವಸ್ತುಗಳನ್ನು ಇಡಲಾಗಿದೆ. ಗರ್ಭಗೃಹದ ಮುಂಭಾಗದಲ್ಲಿ ತೆರೆದ ಸಭಾ ಮಂಟಪವಿದ್ದು, ಇದು ಅಂತರಾಳದಿಂದ ಕೂಡಿದ ಆಧುನಿಕ ಶೈಲಿಯ ಕಟ್ಟಡವಾಗಿದೆ. ಇದನ್ನು ಕಬ್ಬಿಣದ ಸಲಾಕೆಗಳಿಂದ ಮತ್ತು ಪತ್ರಾಸ್‌ಗಳಿಂದ ನಿರ್ಮಿಸಲಾಗಿದೆ. ಇದರ ಮಧ್ಯದಲ್ಲಿ ಸುಮಾರು 14 ನೇ ಶತಮಾನದ ಸಂಜೀವನ ಮೂರ್ತಿಯನ್ನು ಇಡಲಾಗಿದೆ. ಗರ್ಭಗೃಹದ ಸುತ್ತಲೂ ಹೊರ ಪ್ರದಕ್ಷಣ ಪಥವಿದೆ. ದೇವಾಲಯದ ಗರ್ಭಗೃಹ ದಕ್ಷಿಣೋತ್ತರ 11 ಅಡಿ ಉದ್ದ – ಪೂರ್ವ – ಪಶ್ಚಿಮ 15 ಅಡಿ ಅಗಲ ಎತ್ತರ 11 ಅಡಿ ಇದೆ. ಗರ್ಭಗೃಹವನ್ನು





S.C. Arts and Commerce College BANHATTI 587 311

ಎರಡು ಅಡಿ ಎತ್ತರದ ಜಗತಿಯ ಮೇಲೆ ನಿರ್ಮಿಸಲಾಗಿದೆ. ಅಂತರಾಳ ಅಥವಾ ಗರ್ಭಗೃಹದ ಇಕ್ಕೆಲಗಳಲ್ಲಿ ಕಮಾನಿನಾಕಾರದ ಕಂಬಗಳ ರಚನೆ ಕಂಡುಬಂದಿದೆ. ಮೂರು ಪ್ರಕಾರದಲ್ಲಿ ಇದರ ಅಂತರಾಳ ಕಂಡು ಬಂದಿದೆ. ಗರ್ಭಗೃಹದ ಒಳಭಾಗದಲ್ಲಿ ಬಲಭೀಮ ದೇವರ ಮೂರ್ತಿ 5–6 ಅಡಿಯಷ್ಟು ಎತ್ತರವಿದ್ದು, ಉದ್ಭವ ಮೂರ್ತಿಯಾಗಿದೆ. ಈ ಮೂರ್ತಿಗೆ ಮುಖ, ಕೈ – ಶರೀರ ಕಂಡು ಬಂದಿದೆ. ಆದರೆ ತಾಮ್ರಪಟಶಾಸನದ ಪ್ರಕಾರ ಈ ಮೂರ್ತಿ ಅಪೂರ್ಣಗೊಂಡಂತಾಗಿದೆ. ಕಾರಣ ಈ ಕಟ್ಟಡದ ಸ್ಥಾಪಕರಾದ ಧನಾಯಿ ಮತ್ತು ಮಾಳಾಯಿಯಿಂದ ಸ್ವಪ್ನದಲ್ಲಿ ಹುತ್ತಿನ ಸುತ್ತ ಗರ್ಭಗೃಹ ನಿರ್ಮಿಸಿ 9 ತಿಂಗಳವರೆಗೆ ಅದನ್ನು ತೆರೆಯಬಾರದು. ನಂತರ ನಾನು ಬಲಭೀಮನಾಗಿ ಕಲ್ಲಿನಲ್ಲಿ ಮೂಡುತ್ತೇನೆ ಎಂದು ಸ್ವಪ್ನದಲ್ಲಿ ಆಂಜನೇಯನು ಹೇಳಿದ್ದನಂತೆ. ಹೀಗಾಗಿ ಧನಾಯಿ ಎಂಬ ಗೌಡತಿ ದೇವಾಲಯದ ಗರ್ಭಗೃಹವನ್ನು ನಿರ್ಮಿಸಿ ಬಾಗಿಲು ಮುಚ್ಚಿಸಿದ್ದಳು. ಆದರೆ ಆಕೆಗೆ ಕುತೂಹಲ ತಾಳಲಾರದೆ 7 ತಿಂಗಳಲ್ಲಿ ಬಾಗಿಲು ತೆರದಿದ್ದರಿಂದ ಆ ಮೂರ್ತಿ ಅಪೂರ್ಣವಾಗಿದೆ ಎಂದು ತಿಳಿದು ಬಂದಿತು.

1960 ರಲ್ಲಿ ಶ್ರೀ ರಾಮನಗೌಡ ಪಾಟೀಲ ಹಿತ್ತಾಳೆಯ ತಗಡಿನಲ್ಲಿ ದಶಾವತಾರ ವಿಷ್ಣುವಿನ ಮೂರ್ತಿಯನ್ನು ಕೆತ್ತಿದ್ದಾನೆ. ತಲೆಯ ಮೇಲ್ಭಾಗದಲ್ಲಿ ನಾಗರಹಾವು ಹಾಗೂ ಮೂರ್ತಿಯ ಅಕ್ಕ – ಪಕ್ಕದಲ್ಲಿ ಜಯ – ವಿಜಯರ ಚಿತ್ರಗಳಿದ್ದು ಜೊತೆಗೆ ಚಕ್ರ, ಗಧೆಯನ್ನು ಬಿಡಿಸಲಾಗಿದೆ. ಇವುಗಳು ಮೂಲತಃ ಕಲ್ಲಿನಿಂದ ರೂಪಗೊಂಡಂತವುಗಳಾಗಿವೆ. ಗರ್ಭಗೃಹದ ಹೊರಗೋಡೆಯ ಸುತ್ತಲಿರುವ ಕಪೋತಗಳಿಗೆ ಹೊಂದಿಕೊಂಡಂತಹ ಬೋಧಿಕೆಗಳಿವೆ. ಇವು ಇಂಡೋ – ಇಸ್ಲಾಮಿಕ್ ಶೈಲಿಯಲ್ಲಿವೆ. ಗರ್ಭಗುಡಿಯ ಮೇಲ್ಭಾಗದಲ್ಲಿ 20 ಅಡಿ ಎತ್ತರದ ಶಿಖರವಿದೆ. ಮುಖ್ಯ ಶಿಖರದ ಸುತ್ತಲೂ ಚಿಕ್ಕ – ಚಿಕ್ಕ ನಾಲ್ಕು ಶಿಖರಗಳಿವೆ.

ISSN-2454-678X
VOL-5, ISSUE-7, August 15, 2020 to September 28, 2020
ಸಂಪುಟ–5, ಸಂಚಿಕೆ–7, ಆಗಸ್ಟ್ 15, 2020 ರಿಂದ ಸೆಪ್ಟೆಂಬರ್ 28, 2020

S.T.C. Arts and Commerce College BANAHATTI 587 311

ಬಲಭೀಮ ದೇವರನ್ನು ಕುರಿತು ಗುರುಲಿಂಗಜಂಗಮ ಮಹಾರಾಜರು ಪ್ರಾರ್ಥಿಸಿದ ಪದ್ಯ ಈ ಕೆಳಗಿನಂತಿದೆ.

ನೋಯಿಸಿ ನುಡಿದನ್ಯಾಕೋ । ಶ್ರೀ ಬಲಭೀಮ ॥ ಪಲ್ಲ ॥
ನೋಯಿಸಿ ನುಡಿದನು ದೋಷ ಮಾಡಿದೆನೇನು ?
ಕ್ಲೇಶ ಹರಿಸೋ ಎನ್ನ ಭಾಷೆ ಪಾಲಿಪ ದೇವಾ ॥ ಅನು ಪಲ್ಲವಿ ॥
ದಾಸನ ದಾಸ ನಾನು ಕೇಶವ ಸ್ವಾಮಿ ।
ಕರುಣದಿ ಕಾಯೋ ಎನ್ನ ।
ಏನು ಇಲ್ಲದೆ ಯಾಕೆ ಎನ್ನ ಶಬ್ದ ಶಸ್ತ್ರದಿಂದ ಹೊಡೆದ ।
ಸೋಸಿ ನ್ಯಾಯವ ಮಾಡೋ ವಾಸುದೇವಾ ನೀನು ॥ 1 ॥
ಕಲ್ಲನ್ನು ಮರೆಗೊಂಡೆಯಾ । ಕರುಣಾಕರಾ ।
ಬ್ರೀದವ ಎಲ್ಲಿಟ್ಟೆಯಾ ॥
ಅಲ್ಲಮಪ್ರಭು ನಿಮ್ಮ ಸನ್ನಿಧನಿರುವೆನು ।

ಕಲ್ಲು ಒಡೆದು ನರಸಿಂಹಾ ಕಡೆಗೆ ಬಾರೋ ॥ 2 ॥
ಧರೆಯೋಳು ಧನ್ಯವಾದ । ನಿಂಬರಗಿ ಗ್ರಾಮ ।
ವಾಸುಳ್ಳ ಭೀಮಾ ನೀನು ॥
ಗುರುಲಿಂಗ ಜಂಗಮ ಚಿನ್ಮಯ ರೂಪನೆ ।
ತನು ಮನ ಧನ ನಿಮ್ಮ
ಚರಣ ಕೊಪ್ಪಿತೋದೇವಾ ॥ ॥ 3 ॥

ಬ್ರೀದ = ಬಿರುದ



ISSN-2454-678X
VOL-5, ISSUE-7, August 15, 2020 to September 28, 2020
ಸಂಪುಟ–5, ಸಂಚಿಕೆ–7, ಆಗಸ್ಟ್ 15, 2020 ರಿಂದ ಸೆಪ್ಟೆಂಬರ್ 28, 2020

**ಹೊರಗಿನ ಮರಗಮ್ಮ ದೇವಾಲಯ :**

ದೇವರ ನಿಂಬರಗಿ ಬಸ್ ನಿಲ್ದಾಣದ ಸಮೀಪದ ಅಥವಾ ಸದ್ಗುರು ಗುರುಲಿಂಗಜಂಗಮ ಮಹಾರಾಜರ ದೇವಾಲಯದ ಆವರಣದ ಪಕ್ಕದಲ್ಲಿ ಈ ದೇವಾಲಯವಿದೆ. ಗರ್ಭಗೃಹವುಳ್ಳ ಈ ಚಿಕ್ಕ ದೇವಾಲಯದಲ್ಲಿ ಶಿಲೆ ಇರುವುದರಿಂದ ಇದಕ್ಕೆ ಹೊರಗಿನ ಮರಗಮ್ಮ ಎಂದು ಕರೆಯುವ ಪ್ರತೀತಿ ಇದೆ. ಈ ದೇವಾಲಯ ಪೂರ್ವಾಭಿಮುಖವಾಗಿದೆ.

**ಉತ್ಸವ ಮೂರ್ತಿ ಗುಡಿ :**

ದಾವಲ ಮಲಿಕನ ಸ್ಮಾರಕದ ಸಮೀಪ ಪಾವಟೆಯವರ ಮನೆಯ ಪಕ್ಕದಲ್ಲಿ ಬರುವ ದೇವಾಲಯವೇ ಬಲಭೀಮ ದೇವರ ಉತ್ಸವ ಮೂರ್ತಿ ಮಂದಿರವಾಗಿದೆ. ಇದು ಸುಮಾರು 200 ವರ್ಷಗಳ ಹಿಂದಿನ ಕಟ್ಟಡವಾಗಿದೆ. ಎತ್ತರವಾದ ಅಧಿಷ್ಠಾನದ ಮೇಲೆ ಕರಿಕಲ್ಲಿನ ದೇವಾಲಯ ನಿರ್ಮಾಣಗೊಂಡಿದೆ. ಇದು ತೆರೆದಮಂಟಪ ಹಾಗೂ ಗರ್ಭಗೃಹವನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ 1 ಅಡಿ ಎತ್ತರದ ಮಾರುತಿ ಮೂರ್ತಿ ಬೆಳ್ಳಿಯಿಂದ ಮಾಡಲ್ಪಟ್ಟಿದೆ. ಈ ದೇವಾಲಯ ಪೂರ್ವಭಿಮುಖವಾಗಿದೆ. ಇಲ್ಲಿನ ಭೋದಿಗೆಯಲ್ಲಿರುವ ಕಮಾನುಗಳನ್ನು ಇಂಡೋ – ಇಸ್ಲಾಮಿಕ್ ಶೈಲಿಯಲ್ಲಿ ನಿರ್ಮಾಣಗೊಳಿಸಲಾಗಿದೆ. ಉತ್ಸವ ಮೂರ್ತಿಯನ್ನು ಆಷಾಢ ಏಕಾದಶಿ ಹಾಗೂ ವಿಜಯದಶಮಿ ದಿನ ಪಲ್ಲಕ್ಕಿಯಲ್ಲಿ ಕೂಡ್ರಿಸಿಕೊಂಡು ಊರಪ್ರದಕ್ಷಣ ಹಾಕಿ ಬಲಭೀಮದೇವಸ್ಥಾನಕ್ಕೆ ಭೇಟ್ಟಿಕೊಟ್ಟು ಬರುತ್ತದೆ. ಇಲ್ಲಿರುವ ಜಾಗಟೆ ಸುಮಾರು 200 ವರ್ಷಗಳ ಹಿಂದಿನದಾಗಿದೆ.

**ಕಲ್ಮೇಶ್ವರ ದೇವಾಲಯ :**

ವಿಪರ್ಯಾಸವೆಂದರೆ ಈ ದೇವಾಲಯ ಸುಮಾರು 14 ರಿಂದ 15 ನೇ ಶತಮಾನದ ದೇವಾಲಯವಾಗಿದೆ ಎಂದು ಊಹಿಸಲಾಗಿದೆ. 1995 ರಲ್ಲಿ ಈ

ISSN-2454-678X

ದೇವಾಲಯ ಕುಸಿದಿದ್ದರಿಂದ, ಜನರು ಇದನ್ನು ಭಗ್ನಗೊಳಿಸಿ, ಈಗ ಹೊಸ ಇಟ್ಟಿಗೆಯಿಂದ ಈ ಕಟ್ಟಡವನ್ನು ನಿರ್ಮಿಸಿದ್ದಾರೆ. ಆದರೂ ಅದು ಅಪೂರ್ಣವಾಗಿದೆ. ಕ್ಷೇತ್ರ ಕಾರ್ಯದಲ್ಲಿ ಜನರನ್ನು ವಿಚಾರಿಸಿದಾಗ 5 ಅಡಿ ಎತ್ತರದ ಜಗತೀಯ ಮೇಲೆ ದೇವಾಲಯ, ರಂಗಮಂಟಪ ಹಾಗೂ ಗರ್ಭಗೃಹದ ಎದುರಿಗೆ ನಂದಿವಿಗ್ರಹ ಇದ್ದ ಬಗ್ಗೆ ಸಂಪೂರ್ಣ ಮಾಹಿತಿ ದೊರೆಯಿತು. ದುರಾದೃಷ್ಟವೆಂದರೆ 3 ರಿಂದ 4 ಅಡಿ ಎತ್ತರದ ನಂದಿ ವಿಗ್ರಹವನ್ನು ಇಂದು ನೆಲದಲ್ಲಿ ಹೂತಿದ್ದಾರೆ. ಕಾರಣ ಕೇಳಿದರೆ ಇದು ಭಗ್ನಗೊಂಡಿದೆ ಅದಕ್ಕೆ ಇದನ್ನು ಹೂತಿದ್ದೇವೆ ಎನ್ನುತ್ತಾರೆ. ಪ್ರಾಚ್ಯಶಾಸ್ತ್ರ ಇಲಾಖೆ ಈ ಲೇಖನದ ಮುಖಾಂತರ ಅಲ್ಲಿರುವಂತಹ ಅನೇಕ ಪಳೆಯುಳಿಕೆಗಳನ್ನು ರಕ್ಷಿಸಬೇಕಾಗಿದೆ. ಈ ದೇವಾಲಯದಲ್ಲಿ ಶಿವಲಿಂಗ ಆಂಜನೇಯನ ಮೂರ್ತಿ, ಜೋಡಿ ನಾಗರಹಾವುಗಳ ಶಿಲ್ಪಗಳಿವೆ. ವೆಂಕಣ್ಣ ಗುಮಾಸ್ತರ ಮನೆಯಲ್ಲಿ ನವಶೋಧಿತ ಗಣೇಶನ ಮೂರ್ತಿ ಪಾಯದಲ್ಲಿ ಸಿಕ್ಕಿದೆ. ಇದನ್ನು ಕೂಡ ಇದೇ ದೇವಾಲಯದಲ್ಲಿ ರಕ್ಷಿಸಲಾಗಿದೆ.

**ಶಿವನ ದೇವಾಲಯ :**

ಮಾರುಕಟ್ಟೆಯ ಸಮೀಪ ಬಸದಿಯ ಎದುರಿನ ರಸ್ತೆಯಲ್ಲಿ ಈ ದೇವಾಲಯವಿದೆ. ಆದರೆ ಇದು 1985 ರಲ್ಲಿ ನವೀಕರಣಗೊಂಡಿದೆ. ಇಲ್ಲಿರುವ ಪ್ರಾಚೀನ ಕಾಲದ 5 – 6 ಅಡಿ ಎತ್ತರದ ಕಟ್ಟಿಯ ಮೇಲೆ ಚಿಕ್ಕ ಮಂದಿರವಿತ್ತು. ಅಲ್ಲಿ ಭಗ್ನಗೊಂಡ ನಂದಿಮೂರ್ತಿ ಹಾಗೂ ಶಿವಲಿಂಗವಿದೆ. ದೇವಾಲಯದ ಒಳಗಡೆ ಹೊಸಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ ಇದನ್ನು ಕಲ್ಲು ಸಿಮೆಂಟಿನಿಂದ ಕಟ್ಟಡ ನಿರ್ಮಿಸಿ ತಗಡಿನಿಂದ ಮೇಲ್ಛಾವಣಿಯನ್ನು ಮಾಡಲಾಗಿದೆ. ಆದರೆ ಭಗ್ನಗೊಂಡ ಅವಶೇಷಗಳ ರಕ್ಷಣೆ ಕಾರ್ಯವಾಗಬೇಕಾಗಿದೆ.




ISSN-2454-678X

**ಮಹಾವೀರ ತೀರ್ಥಂಕರ ಬಸದಿ :**

1902 ರಲ್ಲಿ ಈ ಬಸದಿಯನ್ನು ನಿರ್ಮಿಸಿದ್ದಾರೆ. ಇದು ಊರಿನ ಮಾರುಕಟ್ಟೆಯಲ್ಲಿ ಬರುತ್ತದೆ. ಇದನ್ನು ಪೂರ್ವದಲ್ಲಿ ಮುಖ ಮಾಡಿ ನಿರ್ಮಿಸಲಾಗಿದೆ. ಇದನ್ನು ಕಪ್ಪು ಕಲ್ಲು, ಗಚ್ಚು – ಗಾರೆಯಿಂದ ಕಟ್ಟಿದ್ದಾರೆ. ಇದರ ರಂಗಮಂಟಪವನ್ನು ಕಟ್ಟಿಗೆಯ ತೊಲೆಗಳ ಛಾವಣಿಯಿಂದ ನಿರ್ಮಿಸಿದ್ದಾರೆ. ಗರ್ಭಗೃಹದ ಪೂರ್ವ ಗೋಡೆಯಲ್ಲಿ ಕ್ಷೇತ್ರಪಾಲಕನ ಶಿಲ್ಪವಿದೆ. ಗರ್ಭಗೃಹದ 3 ಅಡಿ ಜಗತಿಯ ಮೇಲೆ ಮಹಾವೀರ ತೀರ್ಥಂಕರ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ.

**ದಂಡಿನ್ ಫಿರ್ ದರ್ಗಾ :**

ದಂಡಿನ ಪೀರನ ಪಂಜೆ ದರ್ಗಾ ಕಟ್ಟಿದ್ದರ ಬಗ್ಗೆ ಉಲ್ಲೇಖಗಳು ಲಭ್ಯವಿಲ್ಲ. ಇದರ ಕಟ್ಟಡದ ರಚನೆ ಹಾಗೂ ಸ್ಥಳೀಕರ ಹೇಳಿಕೆಯ ಪ್ರಕಾರ ಇದು ಸುಮಾರು 250 ವರ್ಷಗಳ ಹಳೆಯ ದರ್ಗಾವಾಗಿದೆ. ಇಂಡೋ – ಇಸ್ಲಾಮಿಕ್ ಶೈಲಿಯ ಕಟ್ಟಡವಾದ ಇದು, ಸುತ್ತಲೂ ಆವರಣ, ಒಳಗಡೆ ವಿಶಾಲವಾದ ವರಾಂಡ ಹಾಗೂ ದರ್ಗಾವಿದೆ. ಅಲ್ಲಿ ದಂಡಿನ್ ಪೀರಾ ಎಂಬ ಗುರುಗಳ ಸಮಾಧಿ ಇರುತ್ತದೆ. ಹಿಂದೂ – ಮುಸ್ಲಿಂರ ಆರಾಧ್ಯ ದರ್ಗಾವಾದ ಇದು ಮೊಹರಮ್ ಹಬ್ಬ ಅಂದರೆ ಚೈತ್ರ ಶುದ್ಧ ದಶಮಿಯ ದಿನದಂದು ಬಲಭೀಮ ದೇವರ ಜಾತ್ರೆಯ ಜೊತೆಗೆ ಇದರ ಉತ್ಸವವೂ ಇರುತ್ತದೆ. ಹೀಗಾಗಿ ಎರಡೂ ಜನಾಂಗದವರು ಈ ಹಬ್ಬವನ್ನು ಆಚರಿಸುತ್ತಾರೆ ಎಂಬುದು ಸ್ಥಳೀಕರ ಅನಿಸಿಕೆ ಹಾಗೂ ಒಮ್ಮತಾಭಿಪ್ರಾಯವಾಗಿದೆ.

**1) ದೇವರ ನಿಂಬರಗಿಯ ಇತರೆ ದೇವಾಲಯಗಳು :**

1.ಅಳಬಳಕವ್ವ ದೇವಾಲಯ 2.ಒಳಗಿನ ಮರಗಮ್ಮ ಗುಡಿ 3.ಬನಶಂಕರಿ ಗುಡಿ 4.ಲಕ್ಷ್ಮೀದೇವಿ ಗುಡಿ

S.T.C. Arts and Commerce College BANHATTI 587 311

S.T.C. Arts and Commerce College BANHATTI 587 311



5.ಡೋಹರ ಲಕ್ಷ್ಮೀ ಮಂದಿರ 6.ಲಟಪಿಟೆ ದೇವಾಲಯ 7.ಚೌಡೇಶ್ವರಿ ದೇವಾಲಯ 8.ಅಶ್ವತ್ಥಕಟ್ಟಿ ಗುಡಿ

9.ಬೀರಪ್ಪನ ಗುಡಿ 10.ಶಾಕ್ತರ ಮರಗಮ್ಮ 11.ಪರಮಾನಂದ ಕಟ್ಟಿ ಗುಡಿ

12.ಮಹಾದೇವನಗುಡಿ 13.ಏಳು ಮಕ್ಕಳ ತಾಯಿ ಹೀಗೆ ಇನ್ನೂ ಅನೇಕ ಚಿಕ್ಕ – ಪುಟ್ಟ ಮಂದಿರಗಳು ಊರಿನಲ್ಲಿ ಕಂಡು ಬಂದಿರುವುದರಿಂದ – ಇದಕ್ಕೆ ದೇವರ ನಿಂಬರಗಿ ಎಂದು ಕರೆದಿದ್ದು ಸೂಕ್ತವೆನಿಸುತ್ತದೆ.

**ಶಿಲ್ಪಮೂರ್ತಿಗಳು ಮತ್ತು ಅವಶೇಷಗಳು :**

ದೇವರ ನಿಂಬರಗಿಯ ಬಗ್ಗೆ ಬಿಜಾಪೂರದ ಜಿಲ್ಲಾ ಗೆಜೆಟಿಯರ ಹಾಗೂ ಇಂಡಿ ತಾಲೂಕಿನ ಇತಿಹಾಸ ದರ್ಶನ ಹಾಗೂ ಶ್ರೀ ಬಲಭೀಮದೇವರ ಚರಿತಾಮೃತ ಗ್ರಂಥಗಳನ್ನು ವೀಕ್ಷಿಸಿದಾಗ, ಅಲ್ಲಿ ಯಾವುದೇ ಇತಿಹಾಸದ ಅವಶೇಷಗಳ ಬಗ್ಗೆ ಮಾಹಿತಿ ದೊರೆಯಲಿಲ್ಲ ಅಥವಾ ದಾಖಲಾಗಿಲ್ಲ. ಹಾಗಾಗಿ ಕ್ಷೇತ್ರಕಾರ್ಯ ಕೈಗೊಂಡಾಗ ಅನೇಕ ಭಿತ್ತಿ ಶಿಲ್ಪ ಮೂರ್ತಿಗಳು, ಮಹಾಸತಿಕಲ್ಲುಗಳು, ವೀರಗಲ್ಲುಗಳು ಹೀಗೆ ಅನೇಕ ಅವಶೇಷಗಳು ಕಂಡು ಬಂದಿವೆ. ಇವುಗಳ ಬಗ್ಗೆ ಅಲ್ಲಿಯ ಜನರ ನಿರ್ಲಕ್ಷವೇ ಚರಿತ್ರೆಯ ದಾಖಲೆಗೆ ಅನಾನುಕೂಲವಾಗಿದೆ. ಈ ಲೇಖನದಿಂದ ಪ್ರಾಚ್ಯಶಾಸ್ತ್ರ ಇಲಾಖೆ ಅಥವಾ ಸರ್ಕಾರ ಇವುಗಳನ್ನು ರಕ್ಷಿಸುವ ಕಾರ್ಯ ಮಾಡಬೇಕಾಗಿದೆ.

**1) ವೀರಗಲ್ಲುಗಳು :**

ಬಲಭೀಮ ದೇವಾಲಯದ ಎದುರುಗಡೆ ಸಿದ್ಧರಾಯನ ಚಿಕ್ಕಗುಡಿ ಉತ್ತರಾಭಿಮುಖವಾಗಿ ನಿರ್ಮಾಣಗೊಂಡಿದೆ. ಈ ಗುಡಿಗೆ ಬಣ್ಣ ಬಳಿದಿದ್ದಾರೆ. ಸೂಕ್ಷ್ಮವಾಗಿ ನಾನು ವೀಕ್ಷಿಸಿದಾಗ ದೇವಾಲಯದ ಬಲಬದಿಯ ಗೋಡೆಯಲ್ಲಿ ವೀರಗಲ್ಲುಗಳನ್ನು ಇರುವುದು ಗೋಚರಿಸಿತು. ಒಂದು ವೀರಗಲ್ಲು ಸ್ಪಷ್ಟವಾಗಿ ಇದೆ.





ಜೊತೆಗೆ ಇನ್ನೊಂದು ತುಂಡು ಗಲ್ಲು ಇದೆ. ಒಂದರಲ್ಲಿ ಸೈನಿಕರು ಗುರಾಣಿ ಹಿಡಿದು ಯುದ್ಧ ಮಾಡುವ ದೃಶ್ಯ, ಇನ್ನೊಂದರಲ್ಲಿ ಶಸ್ತ್ರಾಸ್ತ್ರ ರಹಿತ ಹೋರಾಡಿ ಮರಣ ಹೊಂದಿದಾಗ ಆತನ ಆತ್ಮ ಶಿವಲಿಂಗದಲ್ಲಿ ಲೀನವಾಯಿತು ಎಂಬುದಕ್ಕೆ ಸಾಕ್ಷಿ ಮೇಲ್ಭಾಗದಲ್ಲಿ ಶಿವಲಿಂಗವಿದೆ. ಎಡಬದಿಯಲ್ಲಿ ಒಬ್ಬ ವ್ಯಕ್ತಿ ಕುಳಿತು ನಮಸ್ಕರಿಸುವ ದೃಶ್ಯ ಹಾಗೂ ಬಲಬದಿಯಲ್ಲಿ ಒಬ್ಬ ವ್ಯಕ್ತಿ ಲಿಂಗದ ಹತ್ತಿರವಿರುವುದು ಕಂಡುಬರುತ್ತದೆ. ಇದರಲ್ಲಿ ಯಾವುದೇ ಶಾಸನ ಕಂಡುಬಂದಿಲ್ಲ. ಶೈವ ಧರ್ಮದ ಕಲ್ಲಾದ ಇದು ಕಲ್ಯಾಣಿ ಚಾಲುಕ್ಯರ ಕಾಲದ ವೀರಗಲ್ಲುಗಳನ್ನು ಹೋಲುವಂತದ್ದಾಗಿವೆ.

- ಇನ್ನೊಂದು ವೀರಗಲ್ಲಿನ ತುಂಡನ್ನು ಗೋಡೆಯಲ್ಲಿ ನಿರ್ಮಿಸಿ ಅದಕ್ಕೆ ಬಣ್ಣಬಳಿದಿದ್ದಾರೆ. ಆದರೆ ಉಳಿದ ತುಂಡುಗಲ್ಲು ಎಲ್ಲಿದೆ ಎಂಬ ಮಾಹಿತಿ ಲಭ್ಯವಾಗಿಲ್ಲ. ಆದರೆ ಆ ತುಂಡುಗಲ್ಲಿನಲ್ಲಿ ಶಿವಲಿಂಗ, ಎಡಬದಿಯಲ್ಲಿ ಚಾಮರ ಬೀಸುವ ವ್ಯಕ್ತಿಯ ಚಿತ್ರಣ, ಕೆಳಭಾಗದಲ್ಲಿ ನಂದಿ ವಿಗ್ರಹವಿದೆ. ಯಾವುದೇ ಶಾಸನದ ಸಾಲುಗಳು ಇಲ್ಲಿ ಕಂಡುಬಂದಿಲ್ಲ. ಹೀಗೆ ಅನೇಕ ಕಟ್ಟಡದ ಗೋಡೆಗಳಲ್ಲಿ ಇಂತಹ ಅಪರೂಪದ ಕಲ್ಲುಗಳನ್ನು ಬಳಸಿರುವುದು ಕಂಡುಬರುತ್ತದೆ.

**2) ಶಿಲ್ಪ ಮೂರ್ತಿಗಳು :**

- ಸಿದ್ಧರಾಯನ ಗುಡಿಯ ಗರ್ಭಗೃಹದಲ್ಲಿ ಶಿವಲಿಂಗ, ಎಡಬದಿಯಲ್ಲಿ ಗಣೇಶನ ಮೂರ್ತಿ ಇದೆ. ಇದು ಪ್ರಾಚೀನ ಕಾಲದ ಶಿಲ್ಪಮೂರ್ತಿಯಾಗಿದ್ದು ಇದು ಬಲಮುರಿ ಗಣೇಶನ ಮೂರ್ತಿಯಾಗಿದೆ. ಈ ಮೂರ್ತಿಯ ಕೈಯಲ್ಲಿ ಢಮರುಗ ಹಾಗೂ ದಂಡ ಕಂಡುಬಂದಿದೆ. ಇದು 2 ಅಡಿ ಎತ್ತರವಿರಬಹುದು ಎಂದು ಅಂದಾಜಿಸಲಾಗಿದೆ. ಇದಕ್ಕೆ ಎಣ್ಣೆ ಕುಂಕಮ ಹಾಕಿದ್ದರಿಂದ ಇದರ ಪೀಠ ಅಸ್ಪಷ್ಟವಾಗಿದೆ. ಇದರ ಪಕ್ಕದಲ್ಲಿ 2 ತುಂಡು ಶಿವಲಿಂಗಗಳಿವೆ. ಆದರೆ ಅವುಗಳು ಭಗ್ನಗೊಂಡಿವೆ.

ISSN-2454-678X

3) ಬಲಭೀಮ ದೇವಾಲಯದ ಉತ್ತರ ದಿಕ್ಕಿನ ಗಿಡದ ಬುಡದಲ್ಲಿ 2 ಬಿಡಿಭಾಗಗಳು ನಾಗದೇವತೆಗಳ ಶಿಲ್ಪಗಳಿವೆ.

• ಇನ್ನೊಂದು ಕಡೆ ಒಬ್ಬ ವ್ಯಕ್ತಿ ಕುದುರೆಯ ಮೇಲೆ ಕುಳಿತು ಸವಾರಿ ಮಾಡುವ ಶಿಲ್ಪ ಜೊತೆಗೆ ಸವಾರನಿಗೆ ಛತ್ರಿ – ಚಾಮರವಿದೆ. ಇದರಿಂದ ಇದು ಅಶ್ವಮೇಧ ಮಾಡಿರುವುದನ್ನು ಊಹಿಸಬಹುದಾಗಿದೆ. ಇದು ಕಪ್ಪು ಗ್ರಾನೈಟ್ ಕಲ್ಲಿನಿಂದ ಮಾಡಲ್ಪಟ್ಟಿದ್ದು, ಸುಮಾರು 14 ನೇ ಶತಮಾನದಲ್ಲಿ ಕೆತ್ತಲ್ಪಟ್ಟ ಶಿಲ್ಪವಾಗಿದೆ.

4) ಬಲಭೀಮ ದೇವಾಲಯದ ಎದುರಿನ ಸಭಾಮಂಟಪದಲ್ಲಿ ಚಿಕ್ಕದಾದ ಆಂಜನೇಯನ ವಿಗ್ರಹವಿದೆ. ಇದಕ್ಕೆ ಸಂಜೀವನ ಶಿಲ್ಪ ಎಂತಲೂ ಕರೆಯುವ ವಾಡಿಕೆಯಿದೆ.

5) ಮಹಾಸತಿ ಕಲ್ಲು ಊರಿನ ಬಸ್ ನಿಲ್ದಾಣದ ಕಾಂಪ್ಲೆಕ್ಸ್‌ಗಳ ಹಿಂಬದಿಯ ಹೊಲದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿ ಅನಾಥವಾಗಿದೆ. ಅದರಲ್ಲಿ ಸ್ತ್ರೀ ಕೈಮುಗಿದಿರುವ ಚಿತ್ರಣ ಅದರ ಪಕ್ಕದಲ್ಲಿ ಪುರುಷನ ಚಿತ್ರಣವಿದೆ. ಇದು 2 ರಿಂದ 3 ಅಡಿ ಎತ್ತರವಿದೆ. ಕಪ್ಪು ಗ್ರಾನೈಟ್ ಕಲ್ಲಿನಿಂದ ನಿರ್ಮಿಸಿರುವ ಮಹಾಸತಿ ಕಲ್ಲು ಸುಮಾರು 15 ನೇ ಶತಮಾನದ ವಾಸ್ತು ಶಿಲ್ಪಕ್ಕೆ ಸಮಾನವಾಗಿದೆ.

**ಸದ್ಗುರು ಗುರುಲಿಂಗಜಂಗಮ ಮಹಾರಾಜರು ಮತ್ತು ಅವರ ಅವಶೇಷಗಳು**

ಲಿಂಗಾಯತ ಜಾತಿಯ ನೀಲವಾಣಿ ಎಂಬ ಪಂಗಡದಲ್ಲಿ ಭೀಮಣ್ಣಾ ಹಾಗೂ ಅಂಬಾಬಾಯಿಯ ಉದರದಲ್ಲಿ ಮಹಾರಾಜರು ಜನಿಸಿದರು. ಇವರ ಜನ್ಮನಾಮ **ನಾಗಪ್ಪ ಉರ್ಫ ನಾರಾಯಣರಾವ್ ನೀಲಗಾರ.** ಮುಂದೆ ಅವರು ಇದೇ ಹೆಸರಿನಿಂದ ಗುರುತಿಸಿಕೊಂಡರು. ಇವರು ಶಕ 1712 ರಲ್ಲಿ ಜನಿಸಿದರು. ಚಿಕ್ಕಂದಿನಲ್ಲಿ ತಾಯಿಯನ್ನು ಕಳೆದುಕೊಂಡು ಸೋದರತ್ತೆಯಾದ ದೇವಿಕಾಬಾಯಿಯ ಆಶ್ರಯದಲ್ಲಿ ಬೆಳೆದರು. ಗುರುಲಿಂಗಜಂಗಮರು ಕೊಲ್ಹಾಪುರದ ಸಿದ್ಧಗಿರಿಯಲ್ಲಿ ಸುಮಾರು




ISSN-2454-678X
S.T.C. Arts and Commerce College BANHATTI 587 311

ವರ್ಷಗಳವರೆಗೆ ವಾಸಿಸಿ, ಶ್ರೀ ಕಾಡಸಿದ್ಧೇಶ್ವರನನ್ನು ತನ್ನ ಗುರುವನ್ನಾಗಿ ಮಾಡಿಕೊಂಡರು. ಮುಂದೆ ನಿಂಬರಗಿಗೆ ಬಂದು ವ್ಯವಸಾಯದಲ್ಲಿ ತೊಡಗಿ ಮುಂದೆ ಗೃಹಸ್ಥರಾದರು. ಒಂದು ದಿನ ಜಂಗಮ ವೇಷ ಧರಿಸಿ ಇವರ ಮನೆಗೆ ಬಂದು ನಿಮ್ಮಿಂದ ಒಂದು ಮಹತ್ಕಾರ್ಯವಾಗಬೇಕಾಗಿದೆ. ಹೀಗಾಗಿ ಪಾರಮಾರ್ಥ ಸಾಧನೆಯನ್ನು ಸಾಧಿಸಿ ಎಂದು ಒಂದು ತೆಂಗಿನಕಾಯಿಯನ್ನು ಕೊಟ್ಟು ಅದೃಶ್ಯರಾದರು. "ಅಂತಹಃ ಕರುಣೆ ನೋಡಮ್ಮಾ ಗುರುರಾಯ ತನ್ನಂತೆ ಮಾಡಿದನಲ್ಲೊಕಾಯ" ಅಂದಿನಿಂದ ಮಹಾರಾಜರು ನಿತ್ಯಭಜನೆ, ಧ್ಯಾನವನ್ನು ಮಾಡುವುದರ ಜೊತೆಗೆ ತನ್ನ ನಿತ್ಯ ಕಾರ್ಯಗಳನ್ನು ಪೂರ್ಣಗೊಳಿಸುತ್ತಿದ್ದರು. ಮುಂದೆ ಪಂಢರಪುರ, ನರಸಿಂಹವಾಡಿ ಮುಂತಾದ ಸ್ಥಳಗಳಿಗೆ, ಭೇಟಿ ನೀಡಿದರು, ಹೀಗೆ ಸತತವಾಗಿ 30 ವರ್ಷಗಳವರೆಗೆ ತಮ್ಮ ಕಾಯಕವನ್ನು ಮುಂದುವರೆಸಿಕೊಂಡು ಬಂದರು. ಕರ್ನಾಟಕ ಹಾಗೂ ಮಹಾರಾಷ್ಟ್ರದ ಸಾವಿರಾರು ಶಿಷ್ಯರಿಗೆ ಬೋಧನೆಯನ್ನು ಮಾಡಿ, ಅನೇಕ ಮಠಗಳು, ಸಾಧು – ಸತ್ಪುರುಷರನ್ನು ರೂಪಿಸುವಲ್ಲಿ ಇವರ ಪಾತ್ರ ಅಮೋಘವಾದದ್ದು. ಬಲಭೀಮನಿಗೆ ದಿನ ನಿತ್ಯ ಬೆಳಗುತ್ತಿದ್ದ ಕರ್ಪೂರ ಆರತಿ ಇಂದು ಮಹಾರಾಜರ ವಂಶಸ್ಥರಾದ ಮಲ್ಲಿಕಾರ್ಜುನ ಗುರುಸಿದ್ಧಪ್ಪ ನೀಲವಾಣಿಯವರ ಮನೆಯಲ್ಲಿದೆ. ಇದನ್ನು ಇಂದು ಅವರು ಸುರಕ್ಷಿತವಾಗಿ ರಕ್ಷಿಸಿದ್ದಾರೆ. ಜನರಿಗೆ ತೋರಿಸಲು ಅದರಂತೆ ಮತ್ತೊಂದನ್ನು ಪ್ರತಿರೂಪದ ಹಿತ್ತಾಳೆಯಲ್ಲಿ ಮಾಡಿಸಿದ್ದಾರೆ. ಈ ಆರತಿ ಕಮಲಾಕೃತಿಯಲ್ಲಿದೆ. ಇದರಲ್ಲಿ 16 ಎಲೆಗಳು ಕೂಡ ಇವೆ. ಕೆಳಗಡೆ ಕೈಹಿಡಕಿ ಇದೆ. ಆರತಿ ಮುಗಿದ ಬಳಿಕ ಕಮಲಹೂವು ಯಾವ ರೀತಿ ಮಗ್ಗಿನ ರೂಪದಲ್ಲಿ ಇರುತ್ತದೆಯೋ ಅದೇ ರೀತಿ ಇದೂ ಕೂಡ ಅಪರೂಪದ ಅವಶೇಷವಾಗಿದೆ.

ISSN-2454-678X
VOL-5, ISSUE-7, August 15, 2020 to September 28, 2020
ಸಂಪುಟ-5, ಸಂಚಿಕೆ-7, ಆಗಸ್ಟ್ 15, 2020 ರಿಂದ ಸೆಪ್ಟೆಂಬರ್ 28, 2020

Commerce College ANHATTI 587 311 S.T.C.

• ಗುರುಲಿಂಗ ಜಂಗಮರು ಉಪಯೋಗಿಸುವಂತಹ ಚಿಲುಮೆ ಹಿತ್ತಾಳೆಯಿಂದ ಮಾಡಲ್ಪಟ್ಟಿದೆ. ಇದು ಕೂಡ ಅಪರೂಪದ ಅವಶೇಷವಾಗಿದೆ.

• ಮಹಾರಾಜರು ಉಪಯೋಗಿಸುವ ಚಂಚಿಯನ್ನು ಅರವಿಯಿಂದ ತಯಾರಿಸಲಾಗಿದೆ. ಚಂಚಿ ಎಂದರೆ ಅಡಕಿ – ಎಲೆಯ ಚೀಲವಾಗಿದೆ.

• ಸದ್ಗುರು ಗುರುಲಿಂಗಜಂಗಮ ಮಹಾರಾಜರು ಕನ್ನಡ ಮತ್ತು ಮರಾಠಿಯಿಂದ ಅನೇಕ ಸಾಹಿತ್ಯ ರಚನೆ ಮಾಡಿದರು. ಇದರಲ್ಲಿ ಸಮಾಜದಲ್ಲಿರುವ ಜನರ ನೋವುಗಳಿಗೆ ಪರಿಹಾರ ಕಂಡುಕೊಳ್ಳುವ ಬಗ್ಗೆ ಹಾಗೂ ಆಧ್ಯಾತ್ಮಿಕದ ಬಗ್ಗೆ ಬರೆದಿದ್ದಾರೆ.

• ಸದ್ಗುರು ರಘುನಾಥ ಪ್ರಿಯ ಸಾಧು ಮಹಾರಾಜರು ಗುರುಲಿಂಗಜಂಗಮರ ಪರಮ ಶಿಷ್ಯರಾಗಿ ಅವರಿಂದ ಪಡೆದ ಜ್ಞಾನವನ್ನು ಪ್ರಚಾರ ಮಾಡುತ್ತಾ ಜಮಖಂಡಿ ತಾಲೂಕಿನ ಚಿಮ್ಮಡ ಗ್ರಾಮದ ಸ್ಮಶಾನದಲ್ಲಿ ನೆಲೆಸಿ ಅದನ್ನು ಪುಣ್ಯ ಭೂಮಿಯಾಗಿ ರೂಪಿಸಿ ಅಲ್ಲಿಯ ಜನರಿಗೆ ಆಧ್ಯಾತ್ಮಿಕ ವಿಚಾರಗಳನ್ನು ಧಾರೆ ಎರೆದು ಜನಮನ ಗಳಿಸಿದರು. ಮುಂದೆ ಇವರು 1879 ರಲ್ಲಿ ಲೀನರಾದ ಬಳಿಕ ಅವರ ಸಮಾಧಿಯನ್ನು ಮಾಡಲಾಯಿತು. ಆ ಸಮಾಧಿಯ ಸ್ಥಳದಲ್ಲಿ ತೀರ್ಥೋದ್ಭವ ಕಾಣಿಸಿಕೊಂಡಿತು. ಆ ತೀರ್ಥ ಇಂದಿಗೂ ಜನರ ರೋಗ – ಭಾದೆಗಳನ್ನು ನಿವಾರಿಸುವಲ್ಲಿ ದಿವ್ಯ ಔಷಧವಾಗಿದೆ. ಇಂದು ಅದೇ ಪರಂಪರೆಯನ್ನು ಶ್ರೀ ಜನಾರ್ಧನ ಮಹಾರಾಜರು ಯಥಾವತ್ತಾಗಿ ಮುಂದುವರೆಸಿಕೊಂಡು ಬರುತ್ತಿದ್ದಾರೆ.

• ಉತ್ತರ ಕರ್ನಾಟಕದ ಪ್ರಸಿದ್ಧ ಮಠ ಇಂಚಗೇರಿಯ ಮಠದ ಸ್ಥಾಪಕರಾದ ಬಾಹುಸಾಹೇಬ ಮಹಾರಾಜರು ಮತ್ತು ಗುರುದೇವ ರಾನಡೆ ಕೂಡ ಗುರುಲಿಂಗ ಜಂಗಮರ ಶಿಷ್ಯರಾಗಿದ್ದರು. ಇಂದು ಈ ಮಠ ಸಮಾಜದಲ್ಲಿನ ಜಾತಿ – ಬೇಧಗಳನ್ನು ತೊಡೆದು ಹಾಕಿ ಭಕ್ತಿಯ ಮಾರ್ಗದ ಕಡೆ ಕೊಂಡೊಯ್ಯುವ ಪ್ರಮುಖ ಸ್ಥಳವಾಗಿದೆ.



ISSN-2454-678X
VOL-5, ISSUE-7, August 15, 2020 to September 28, 2020
ಸಂಪುಟ-5, ಸಂಚಿಕೆ-7, ಆಗಸ್ಟ್ 15, 2020 ರಿಂದ ಸೆಪ್ಟೆಂಬರ್ 28, 2020

• ಮುರಗೋಡದ ಚಿದಂಬರರು, * ಉಮದಿಯ ಬಾಹುಸಾಹೇಬ ಮಹಾರಾಜರ ಮಠ.

• ಸಾಂಗ್ಲಿಯ ಕೋಟ್ನಿಸ್ ಮಹಾರಾಜರು ಹೀಗೆ ಅನೇಕರಿಗೆ ಗುರಲಿಂಗಜಂಗಮ ಮಾಹಾರಾಜರು ದೀಕ್ಷೆ ನೀಡಿ ಜನರನ್ನು ಭಕ್ತಿಯ ಮಾರ್ಗದ ಕಡೆ ಕೊಂಡೊಯ್ದು ನಡೆದಾಡುವ ದೇವರೆಂದೇ ಕರೆಸಿಕೊಂಡ ಪವಾಡ ಪುರುಷರಾಗಿದ್ದಾರೆ. ಇವರ ಚರಿತ್ರೆಯ ಬಗ್ಗೆ ಪುಣೆ ವಿಶ್ವವಿದ್ಯಾಲಯದಲ್ಲಿ ಪಿ.ಎಚ್.ಡಿ ಪ್ರಬಂಧದಲ್ಲಿ ಇವರ ಪವಾಡಗಳ ಬಗ್ಗೆ ಉಲ್ಲೇಖಿಸಲಾಗಿದೆ.

• ಇಂತಹ ಸದ್ಗುರು ಗುರಲಿಂಗಜಂಗಮ ಮಹಾರಾಜರ ಸಮಾಧಿಯನ್ನು ಬಲಭೀಮ ದೇವಾಲಯದ ಎದುರುಗಡೆ ನಿರ್ಮಿಸಲಾಗಿದೆ. ಬಿ.ಡಿ.ಜತ್ತಿಯವರು ಇದರ ಜೀರ್ಣೋದ್ಧಾರ ಕಾರ್ಯ ಕೈಗೊಂಡಿದ್ದರು. ಗುರುಲಿಂಗಜಂಗಮರ ಸಮಾಧಿ 3 ಕಡೆ ಇರುವುದು ವಿಶೇಷವಾಗಿದೆ. ಮೂಲತಃ ಬಲಭೀಮ ದೇವಸ್ಥಾನದ ಎದುರಿಗೆ, ಇನ್ನೊಂದು ಬಸ್ ನಿಲ್ದಾಣದ ಸಮೀಪದಲ್ಲಿದೆ. ಅದು ಇಂದು ದೇವಾಲಯವಾಗಿದೆ. ಹಾಗೂ ಇಲ್ಲಿ ನಿತ್ಯ ಪ್ರವಚನ, ಭಜನೆ ನಡೆಯುತ್ತದೆ. ಚೈತ್ರ ಶುದ್ಧ ದಿನದಂದು ಜಾತ್ರೆ ನಡೆಯುತ್ತದೆ. ಮತ್ತೊಂದು ಸಮಾಧಿ ಇಂಚಗೇರಿಯಲ್ಲಿದೆ. ಗುರುಲಿಂಗಜಂಗಮ ಮಹಾರಾಜರು ಕ್ರಿ.ಶ 1885ರಲ್ಲಿ ಲಿಂಗೈಕ್ಯರಾದರು.

**ಗೌಡರವಾಡೆ :**

ಊರಿನ ಹೊರವಲಯದಲ್ಲಿರುವ ಈ ವಾಡೆ ಸಂಪೂರ್ಣ ಭಗ್ನಗೊಂಡಿದೆ. ಇದನ್ನು ಮಣ್ಣು, ಕಲ್ಲು ಹಾಗೂ ಗಚ್ಚಿನಿಂದ ನಿರ್ಮಿಸಲಾಗಿತ್ತು. ಈಗ ಇಲ್ಲಿ ಯಾವುದೇ ಅವಶೇಷಗಳು ಲಭ್ಯವಾಗಿಲ್ಲ. ಬಳ್ಳೊಳ್ಳಿಯ ದತ್ತಕ ಪುತ್ರನಾದ ನೀಲಕಂಠ

ನಾಖರೆಯಿಂದ ಈ ವಾಡೆಯ ಗೌಡಕಿ ಮನೆತನ ಆರಂಭವಾಯಿತು. ಗೌಡಪ್ಪಗೌಡ, ಶಿವನಗೌಡ, ಥಬಗೌಡ, ವಾಸುದೇವಗೌಡ, ಶಿದಗೌಡ ಹೀಗೆ ಮುಂತಾದ ಗೌಡರು ಊರಿನಲ್ಲಿ ಆಳ್ವಿಕೆ ಮಾಡಿದ ವಿವರಗಳು ಹಾಗೂ ಅವರ ವಂಶಸ್ಥರು ಇಂದು ಪಂಢರಪುರದಲ್ಲಿ ನೆಲೆಸಿದ್ದಾರೆ ಎಂಬ ಮಾಹಿತಿಯನ್ನು ಅವರಿಂದ ಪಡೆಯಲಾಗಿದೆ. ದೇವರ ನಿಂಬರಗಿ ಶ್ರೀ ಬಲಭೀಮ ಚರಿತಾಮೃತ.

ಸಮೀಕ್ಷೆ :

ದೇವರ ನಿಂಬರಗಿ : ಒಂದು ಅಧ್ಯಯನದಿಂದ ಹೊಸ ವಿಷಯಗಳನ್ನು ಬೆಳಕಿಗೆ ತರಲು ಸಾಧ್ಯವಾಗಿದೆ. ಇತಿಹಾಸವನ್ನು ಪುನರ್‌ರಚಿಸಲು ಈ ಲೇಖನ ಆಕರಗಳು ಸಹಾಯಕವಾಗಬಹುದು ಎಂಬ ನಿಲುವು ನನ್ನದಾಗಿದೆ. ಗ್ರಾಮದ ಜನರಿಂದ ನಿರ್ಲಕ್ಷಕ್ಕೆ ಒಳಗಾದ ಅದೇಷ್ಟೋ ಶಿಲ್ಪಮೂರ್ತಿಗಳು, ವೀರಗಲ್ಲುಗಳು, ಮಹಾಸತಿಕಲ್ಲುಗಳು ಹಾಗೂ ದೇವಾಲಯಗಳ ಅನೇಕ ಅವಶೇಷಗಳನ್ನು ರಕ್ಷಿಸಿ, ಸಂಶೋಧನೆ ನಡೆಸಿದರೆ ಇನ್ನೂ ಅನೇಕ ಕುರುಹುಗಳು ಲಭ್ಯವಾಗಬಹುದು. ಈ ಸ್ಥಳದಲ್ಲಿರುವ ಅನೇಕ ದೇವಾಲಯಗಳ ವಿಶೇಷವೆಂದರೆ ಶೈವ ವೈಷ್ಣವ, ಜೈನ, ಮುಸ್ಲಿಂ ಹಾಗೂ ವೀರಶೈವ ಧರ್ಮದ ದೇವಾಲಯಗಳು ಮತ್ತು ಮಸೀದಿ, ದರ್ಗಾ ಇರುವುದರಿಂದ ಇಲ್ಲಿಯ ಜನರು ಪ್ರಾಚೀನದಲ್ಲಿಯೂ ಸರ್ವ ಸಮಾನರಾಗಿದ್ದರು ಎಂಬುದಕ್ಕೆ ಈ ಅವಶೇಷಗಳೇ ಸಾಕ್ಷಿಯಾಗಿ ನಿಂತಿವೆ. ಸರ್ಕಾರಕ್ಕೆ ನನ್ನ ಮನವಿ ಏನೆಂದರೆ ನಿಂಬರಗಿಯ ಊರಿನಲ್ಲಿ ಅನೇಕ ಅವಶೇಷಗಳು ದಿವ್ಯ ನಿರ್ಲಕ್ಷಕ್ಕೆ ಒಳಗಾಗಿ ಅಲ್ಲಲ್ಲಿಯೇ ಬಿದ್ದಿವೆ. ಅವುಗಳನ್ನು ರಕ್ಷಿಸಿ ಭವಿಷ್ಯತ್ತಿನ ಜನಾಂಗಕ್ಕೆ ಮತ್ತು ನಾಡಿನ ಇತಿಹಾಸದ ಶ್ರೀಮಂತಿಕೆಯನ್ನು ತೋರಿಸುವುದು ನಮ್ಮ ಹೊಣೆಯಾಗಿದೆ. ಹೀಗಾಗಿ ಇವುಗಳನ್ನು ರಕ್ಷಿಸಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ. ಹಾಗೆಯೇ ಸಂಶೋಧಕರು ಗುರುಲಿಂಗಜಂಗಮ ಮಹಾರಾಜರ ನಿಂಬರಗಿ ಸಂಪ್ರದಾಯ





ಹಾಗೂ ಅದರ ಶಾಖೆಗಳ ಬಗ್ಗೆ ಅಧ್ಯಯನ ನಡೆಸಿದರೆ, ಕನ್ನಡ ಹಾಗೂ ಮರಾಠಿಯ ಅನೇಕ ಸಾಹಿತ್ಯ ಬೆಳಕಿಗೆ ಬರುತ್ತದೆ ಎಂಬುದು ನನ್ನ ಅನಿಸಿಕೆಯಾಗಿದೆ. ನನ್ನ ಈ ಲೇಖನ ರಚನೆ ಮಾಡುವಲ್ಲಿ ಮಾರ್ಗದರ್ಶನ ನೀಡಿದ ಗುರುಗಳಾದ ಪೂಜ್ಯರಾದ ಚಿಮ್ಮಡ ಮಠದ ಶ್ರೀ ಜನಾರ್ಧನ ಮಹಾರಾಜರು ಪ್ರೊ. ಓಂಕಾರ ಜ. ಯರಗಟ್ಟಿಕರ, ಶ್ರೀ ಭೀಮಾಶಂಕರ ಮಹಾರಾಜರು ದೇವರ ನಿಂಬರಗಿ ಇವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

**ಆಧಾರ ಗ್ರಂಥಗಳು :**

1) ವೀರೇಂದ್ರ ಸಿಂಪಿ, ಚಡಚಣ – ಇಂಡಿ ತಾಲೂಕಿನ ಇತಿಹಾಸ
2) ಶ್ರೀಮತಿ ಪದ್ಮಾ ಕುಲಕರ್ಣಿ – ನಿಂಬರಗಿ ಸಂಪ್ರದಾಯಚೆ ಇತಿಹಾಸಂತೀಲ ಸೋನೇರೆ ಪಾನೆ (ಮರಾಠಿ)
3) ಶಿವಶಂಕರ ಹೊನ್ನುಂಗರ – ದೇವರ ನಿಂಬರಗಿಯ ಶ್ರೀ ಬಲಭೀಮ ದೇವರ ಚರಿತಾಮೃತ
4) ಬಿಜಾಪೂರ ಜಿಲ್ಲೆಯ ಗೆಜೆಟಿಯರ್
5) ಬಹ್ಮನಿಷ್ಠ ವಾಮನ – ಶ್ರೀ ಗುರು ಲೀಲಾಮೃತ ( ಮರಾಠಿ )
6) ಡಾ॥ ಜಿ.ಎಸ್. ಉಪಾಧ್ಯೆ ಡಾ॥ ದೇವರಕೊಂಡರೆಡ್ಡಿ – ಮಹಾರಾಷ್ಟ್ರದ ಕನ್ನಡ ಶಾಸನಗಳು (Vol P- R) ಮ.ಸಂ 248
7) ಜಿ.ಎನ್.ಉಪಾಧ್ಯೆ – ಮಹಾರಾಷ್ಟ್ರ – ಕರ್ನಾಟಕ ಸಾಂಸ್ಕೃತಿಕ ಸಂಬಂಧ
8) ಸನ್ಮಾರ್ಗದೀಪ – ಸಾಂಗ್ಲಿ ಕೋಟ್ನಿಸ್ ಮಹಾರಾಜರ ಸದ್ಭಕ್ತ ಮಂಡಳಿ
9) ಸ್ಥಳೀಕರ ಅಭಿಪ್ರಾಯಗಳು – ಶ್ರೀ ಭೀಮಾಶಂಕರ ಮಹಾರಾಜರು, ಶ್ರೀ ಜನಾರ್ಧನ ಮಹಾರಾಜರು, ಶ್ರೀ ಮಲ್ಲಿಕಾರ್ಜುನ ನೀಲವಾಣಿ.

S.T.C. Arts and Commerce College BANHATTI 587 311

Co-ordinator
IQAC
JSS STC Art's and Commerce College.
BANHATTI -587311. Dist. Bagalkote.

PRINCIPAL
STC Arts & Commerce College
BANHATTI ( Dist: Bagalkot)